ಉತ್ತರ : ಶ್ರೀ ಬಿ. ರಾಚಯ್ಯ (ಶಿಕ್ಷಣ ಮಂತ್ರಿಗಳು). — ಅ) ಬಂದಿದೆ.

ಆ) (1) ಸಾರ್ವಜನಿಕರಿಂದ ದಿನಾಂಕ 28-7-83. (2) ಶಾಸಕರಿಂದ ದಿನಾಂಕ 18-8-1983 ಮತ್ತು ಮುಂದಿನ ತಾರೀಖುಗಳಲ್ಲಿ.

ಇ) ಈ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಆರ್. ಎನ್ ನಾಯಕ್.— ಮಾನ್ಯ ಅಧ್ಯಕ್ಷರೇ, ಪರಿಶೀಲನೆಯಲ್ಲಿದೆ ಎಂದರೆ ಯಾವ ಹಂತದಲ್ಲಿದೆ ; ಅದು ಆಗುವ ಸಾಧ್ಯತೆ ಏನಾದರೂ ಇದೆಯೇ ; ಅಥವಾ ಮಂತ್ರಿಗಳಿಗೆ ಮನಸ್ಸಿದೆಯೇ ಎನ್ನುವುದರ ಬಗ್ಗೆ ನನಗೆ ಮನವರಿಕೆ ಮಾಡಿಕೊಡುತ್ತೀರಾ ?

ಶ್ರೀ ಬಿ. ರಾಚಯ್ಯ.— ಮಾನ್ಯ ಅಧ್ಯಕ್ಷರೇ, ಸರಕಾರವೇ ವಹಿಸಕೊಳ್ಳಿ ಎಂದು ಬರೆದಿದ್ದಾರೆ. ಇವರಿಗೆ ಎಷ್ಟು ಆಸ್ತಿ ಇದೆ, ಎಷ್ಟು ಶಾಲಾ ಕಟ್ಟಡಗಳಾಗಿವೆ, ಉಪಾಧ್ಯಾಯರು ಎಷ್ಟು ಜನ ಇದ್ದಾರೆ, ಸರಕಾರಕ್ಕೆ ಭಾರ ಎಷ್ಟು ಹೆಚ್ಚಾಗುತ್ತದೆ, ಎಂಬ ವಿವರಗಳನ್ನು ತರಿಸುತ್ತಿದ್ದೇನೆ. ಅದು ಬಂದ ಮೇಲೆ ಸರಕಾರ ಇದನ್ನು ನಡೆಸುವುದಕ್ಕೆ ಸಾಧ್ಯವೇ ಇಲ್ಲವೇ ಎಂಬ ಬಗ್ಗೆ ತೀರ್ಮಾನ ತೆಗೆದುಕೊಳ್ಳುತ್ತೇವೆ.

ಶ್ರೀ ಆರ್. ಎನ್ ನಾಯಕ್.—ಶಾಲೆಗಳ ಆಸ್ತಿ ಎಷ್ಟಿದೆ ಎಂಬುದನ್ನು ಮ್ಯಾನೇಜ್‌ಮೆಂಟ್‌ನವರು ಬರೆದು ಈಗಾಗಲೇ ಕಳುಹಿಸಿಕೊಟ್ಟು ಬಿಟ್ಟಿದ್ದಾರೆ. ಸರಕಾರ ಆಲ್ಲಿಯ ಟೀಚರ್ಸ್‌ಗಳಿಗೆ ಪಗಾರ ಈಗಾಗಲೇ ಕೊಡುತ್ತಿದೆ. ಆದುದರಿಂದ ಸರಕಾರಕ್ಕೆ ಭಾರ ಬರುವುದಿಲ್ಲ. ಮಂತ್ರಿಗಳು ಇದರ ಬಗ್ಗೆ ತಿಳಿದುಕೊಳ್ಳಬೇಕು ಮತ್ತು ಒಪ್ಪಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

3. ಸಿನೇ ಪಟ್ಟಿಯಿಂದ ಮುಂದೂಡಲಾದ ಪ್ರಶ್ನೆ

ಶ್ರೀ ಬಿ. ರಾಚಯ್ಯ :— ವಿವರಗಳನ್ನು ತರಿಸಿ ತೀರ್ಮಾನ ಮಾಡಬೇಕಾಗಿದೆ.

ವಿಷಯ :— ಬೆಂಗಳೂರು ಡೈರಿ ಹಾಲಿನ ದರದ ಬಗ್ಗೆ.

ಪ್ರಶ್ನೆ : 19 (48) ಶ್ರೀ ಪಿ. ರಾಮದೇವ್ (ಮಲ್ಲೇಶ್ವರಂ).— ಮಾನ್ಯ ಪಶು ಸಂಗೋಪನೆ ಮತ್ತು ತೋಟಗಾರಿಕೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅನುಬಂಧ

1980–81; 1981–82 ಮತ್ತು 1982–83 ಸಾಲಿನ ಬೆಂಗಳೂರು ಡೈರಿಯಲ್ಲಿ ಮಾರಾಟವಾದ

ಕ್ರಮ ಸಂಖ್ಯೆ	ವಿವರ	1980–81 ಪ್ರಮಾಣ	ಮೌಲ್ಯ
1.	ಹಾಲು ಲೀಟರ್‌ಗಳಲ್ಲಿ	6,91,39,946·13	16,,0,08,575·52
2.	ಮೊಸರು – ,, –	9,63,700·50	25,79,514·25
3.	ಬೆಣ್ಣೆ ಕೆ.ಜಿ.ಗಳಲ್ಲಿ	1,36,158·80	25,86,146·70
4.	ತುಪ್ಪ – ,, –	7,07,129·50	179,44,808·94
5.	ಪೇಡ – ,, –	3,915·775	1,06,793·60
6.	ಲಸ್ಸಿ ಲೀಟರ್‌ಗಳಲ್ಲಿ	8,527·00	21,718·10
7.	ಸ್ಕಿಂ ಹಾಲು –,,–	21,467·40	29,725·15
8.	ಬೆಣ್ಣೆ-ಎಣ್ಣೆ ಕೆಜಿ.ಗಳಲ್ಲಿ		
9.	ಕೆನೆ	5,156·35	56,510·48
10.	ಎಸ್. ಪಿ. ಎಂ– ,, –	77,726·65	11,06,977·41
11.	ಕೇಸಿನ್ – ,, –	1,17,125·50	11,19,753·71
12.	ಸ್ಕಿಂಹಾಲಿನಪುಡಿ-,,-	350·00	7,550·00
13.	ಆರ್.ಎತ್ ಎಂ. ಲೀಟರ್	3,52,723·00	4,41,106·25
14.	ಡಿ.ಟಿ.ಎಂ ಲೀಟರ್	4,07,200·50	5,29,360·00
			18,95,38,540·81

ಆ) ಬೆಂಗಳೂರು ನಗರದಲ್ಲಿ ಡೈರಿ ಹಾಲಿನ ಬೆಲೆ ಹೆಚ್ಚಿಸಲು ಕಾರಣಗಳೇನು ;

ಆ) ಕಳೆದ ಮೂರು ವರ್ಷಗಳಿಂದ ಡೈರಿ ಹಾಲುತಪ್ಪ ಮತ್ತು ಇತರ ಡೈರಿ ಪದಾರ್ಥಗಳ ಮಾರಾಟದಿಂದ ಬಂದ ಹಣವೆಷ್ಟು; (ಮತ್ತು ಮಾರಾಟ ಮಾಡಿದ ಪ್ರಮಾಣವೆಷ್ಟು) ?

ಇ) ರಾಷ್ಟ್ರದ ಎಲ್ಲಾ ನಗರಗಳಲ್ಲಿಯೂ ನಗರ ಹಾಲು ಸರಬರಾಜಿಗೆ ಆಯಾ ಸರಕಾರದವರು ಸಹಾಯ ಧನ ನೀಡುತ್ತಿರುವುದು ಸರಕಾರದವರ ಗಮನಕ್ಕೆ ಬಂದಿದೆಯೇ ;

ಈ) ಬೆಂಗಳೂರು ನಗರದ ಡೈರಿಗೆ ಕಳೆದ ಮೂರು ವರ್ಷಗಳಿಂದಲೂ ಸರಕಾರದವರು ನೀಡುತ್ತಿರುವ ಸಹಾಯ ಧನವೆಷ್ಟು ?

ಉತ್ತರ : ಶ್ರೀ ಎಂ. ಪಿ. ಪ್ರಕಾಶ್ (ಸಾರಿಗೆ ಸಚಿವರು) (ಶ್ರೀ ವಿಶ್ವನಾಥರೆಡ್ಡಿ ಮುದ್ನಾಳ್ ಪಶು ಸಂಗೋಪನೆ ಮತ್ತು ತೋಟಗಾರಿಕೆ ಮಂತ್ರಿಗಳ ಪರವಾಗಿ).— ಅ) ಸರ್ಕಾರದಿಂದ ಸಿಗುತ್ತಿರುವ ಸಹಾಯ ಧನದ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡುವುದು ಮತ್ತು ಬೆಂಗಳೂರು ಹೈನುಗಾರಿಕೆ ನಿಗಮವನ್ನು ಸ್ವಯಂಪೂರ್ಣ ಸ್ವತಂತ್ರವಾಗಿ ಕಾರ್ಯನಿರ್ವಹಿಸುವಂತಾಗಲು ಉದ್ದೇಶಿಸಲಾಗಿದೆ.

ಆ) ಬೆಂಗಳೂರು ಡೈರಿಯಲ್ಲಿ 3 ವರ್ಷಗಳಿಂದ ಹಾಲು ಮತ್ತು ಹಾಲಿನ ಉತ್ಪನ್ನಗಳ ಮಾರಾಟದ ಪ್ರಮಾಣವನ್ನು ಅನುಬಂಧ 'ಅ"ದಲ್ಲಿ ಕೊಡಲಾಗಿದೆ. ಇ) ಇಲ್ಲ,

ಈ) ಬೆಂಗಳೂರು ನಗರದ ಡೈರಿಗೆ ಕಳೆದ ಮೂರು ವರ್ಷಗಳಿಂದಲೂ ಸರ್ಕಾರದವರು ನೀಡುತ್ತಿರುವ ಸಹಾಯಧನ ಕೆಳಕಂಡಂತಿದೆ.

ವರ್ಷ	ಮುಂಗಡ
1980-81	— ರೂ. 63.67 ಲಕ್ಷಗಳು
1981-82	— ರೂ.
1982-83	— ರೂ. 10.63 ಲಕ್ಷಗಳು

'ಅ'

ಹಾಲು ಮತ್ತು ಹಾಲಿನ ಉತ್ಪನ್ನಗಳ ಪ್ರಮಾಣ ಮತ್ತು ಮೌಲ್ಯವನ್ನು ತೋರಿಸುವ ಪಟ್ಟಿ.

1981–82		1982–83	
ಪ್ರಮಾಣ	ಮೌಲ್ಯ	ಪ್ರಮಾಣ	ಮೌಲ್ಯ
6,54,68,782·2	18,15,07,089·89	7,58,70,893·0	21,38,70,496·93
9,49,274·0	29,62,102·15	9,19,517·0	30,19,740·45
1,01,795·83	31,58,007·16	1,01,808·6	35,23,228·38
4,16,244·9	1,35,91,194·13	5,74,210·250	2,02,11,936·01
6,530·450	2,17,439·85	13,775·550	4,30,355·06
11,090·800	27,820·60	14,858·200	35,793·85
28,49,719·400	58,55,443·75	6,379·800	43,207·55
1,15,056·0	28,53,523·56	2,05,408·000	46,74,667·09
2·325	29·15	17·750	229·87
31,784·0	4,94,562·24	50,836·000	8,73,885·06
20,029·500	8,09,654·46	4,725·00	68,012·55
240·50	4,129·20	8·000	185·00
—	—	—	—
22·0	150·00	—	—
	21,10,11,146·14		24,67,51,838·38

ವಿ. ಸೂ. : ಲೇಖಾ ಪರೀಕ್ಷೆಯಂ ಅಧೀನ ಮೇಲ್ಕಾಣಿಸಿದ ಸಂಖ್ಯೆಗಳು ತಾತ್ಕಾಲಿಕ.

ಶ್ರೀ ಪಿ. ರಾಮದೇವ್ :— ಮಾನ್ಯ ಅಧ್ಯಕ್ಷರೇ, ಹಾಲಿನ ಬೆಲೆ ಹೆಚ್ಚಿಸುವುದಕ್ಕೆ ಸಹಾಯಧನದ ಮೇಲಿನ ಅವಲಂಬನೆ ಕಡಿಮೆ ಮಾಡಿ ಮತ್ತು ಪೈಸುಗಾರಿಕೆ ನಿಗಮವನ್ನು ಸ್ವತಂತ್ರ ಸ್ವಯಂಪೂರ್ಣ ಸಂಸ್ಥೆಯನ್ನಾಗಿ ಮಾಡಬೇಕೆಂಬ ಕಾರಣ ಕೊಟ್ಟಿದ್ದಾರೆ. ಸ್ವಾಮಿ, 1982-83ರಲ್ಲಿ ಎಷ್ಟು ನಷ್ಟವಾಗಿದೆ. ಮತ್ತು 1983-84ರಲ್ಲಿ ಎಷ್ಟು ನಷ್ಟವಾಗಿದೆ ಎಂಬುದನ್ನು ಹೇಳುತ್ತೀರಾ ? ಹಾಗೂ ಎಷ್ಟು ಸಹಾಯಧನ ಕೊಟ್ಟಿದ್ದೀರಿ ಎಂಬುದನ್ನು ಹೇಳುತ್ತಿರಾ ?

ಶ್ರೀ ಎಂ. ಪಿ. ಪ್ರಕಾಶ್ :— ಸನ್ಮಾನ್ಯ ಅಧ್ಯಕ್ಷರೇ, ಅವರು ಹೇಳಿದಂತೆ ಪರಿವರ್ತನ ಮಾಡ್ತಾ ಉತ್ಪಾದಕರಿಗೆ ಬೆಚ್ಚ, ಸಾಗಾಣಿಕೆ ಬೆಚ್ಚ ಮತ್ತು ದರದಲ್ಲಿ ಹೆಚ್ಚಳ, ಸಂಬಳ ಸಾರಿಗೆಗಳ ಹೆಚ್ಚಳ ಇವುಗಳು ದರಗಳನ್ನು ಹೆಚ್ಚಿಸಲು ಒಂದು ಕಾರಣ. ಇದರ ಮೂಲಕ ಸರಕಾರದ ಸಹಾಯಧನ ಕಡಿಮೆ ಮಾಡಿ ಇದನ್ನು ಸ್ವಾವಲಂಬನಾ ಸಂಸ್ಥೆಯನ್ನಾಗಿ ಮಾಡಬೇಕೆಂಬ ಉದ್ದೇಶದಿಂದ ಸ್ವಲ್ಪಮಟ್ಟಿಗೆ ಹೆಚ್ಚಳ ಮಾಡಿದ್ದೇವೆ. 1980-81ರಲ್ಲಿ 63.67 ಲಕ್ಷ ರೂಪಾಯಿಗಳ ಮುಂಗಡ ಬಂದಿದೆ. 1982-83ರಲ್ಲಿ 10.63 ಲಕ್ಷ ರೂಪಾಯಿಗಳು ಬೆಂಗಳೂರು ನಗರದ ಡೈರಿಗೆ ಬಂದಿದೆ. ಇಡೀ ಕರ್ನಾಟಕದಲ್ಲಿರುವ ಎಲ್ಲ ಡೈರಿ ಉದ್ಯಮಗಳಿಗೆ ಸುಮಾರು ಈಗ 3.35 ಲಕ್ಷ ರೂಪಾಯಿಗಳಾಗುತ್ತದೆ. 185 ಲಕ್ಷ ರೂಪಾಯಿಗಳು ಹಾಲು ಉತ್ಪಾದಕರ ಸಂಸ್ಥೆಗಳಲ್ಲಿ, 150 ಲಕ್ಷ ರೂಪಾಯಿಗಳು ಕ್ಷೀರ ಕೇಂದ್ರಗಳಿಂದ ಲುಕ್ಸಾನುಗಳನ್ನು ಭರಿಸಲಾಗಿದೆ 3.35 ಲಕ್ಷ ರೂ ಗಳನ್ನು ಧನ ಸಹಾಯ ರೂಪದಲ್ಲಿ ರಾಜ್ಯ ಸರಕಾರದವರು ಕೊಡುತ್ತಿದ್ದಾರೆ. ಈ ಸಂಸ್ಥೆಯನ್ನು ಸ್ವಾವಲಂಬಿಯನ್ನಾಗಿ ಮಾಡುವುದಕ್ಕೆ ಈ ರೀತಿ ಹೆಚ್ಚಳ ಮಾಡಿದೆ.

ಶ್ರೀ ಪಿ. ರಾಮದೇವ್—ಸ್ವಾಮಿ, ಈಗ ಮೂರೂವರೆ ಕೋಟಿ ರೂಪಾಯಿಗಳು ಈ ವರ್ಷ ನಷ್ಟವಾಗುತ್ತದೆ ಎನ್ನುವ ದೃಷ್ಟಿಯಿಂದ ತಾವು ಬೆಲೆ ಏರಿಸಿದ್ದೀರಿ ಎಂದು ಹೇಳುತ್ತಿದ್ದೀರಿ. ನಾನು ಕಮಿಗೆ ಹೇಳುವುದೇನೆಂದರೆ ಅಂಕ ಸಂಖ್ಯೆಗಳನ್ನು ಕೊಟ್ಟಿದ್ದೀರಿ. ಆದರೆ ಇವತ್ತು ಹಾಲಿನಲ್ಲಿ ಏನಾಗುತ್ತಿದೆ ಎಂದರೆ, ಕನ್ನಡದ ಹಸು, ಕನ್ನಡದ ಡೈರಿ, ಕನ್ನಡದ ಹಾಲು, ಕನ್ನಡದ ಮೊಸರು, ಕನ್ನಡದ ತುಪ್ಪ ಇದನ್ನು ಕಡಿಮೆ ರೇಟಿನಲ್ಲಿ ಆಂಧ್ರದಲ್ಲಿ, ತಮಿಳುನಾಡಿನಲ್ಲಿ ಮಾರುತ್ತಿದ್ದಾರೆ. ಗುಜರಾತ್‌ನಲ್ಲಿ ಮಾರುತ್ತಿದ್ದಾರೆ ಸುಮಾರು ಒಂದು ಕೋಟಿರೂಪಾಯಿಗಳ ಪ್ರಾಫಿಟ್ ಮಾಡಿಸಿ ತೋರಿಸುತ್ತೇನೆ. ಬರೀ ತುಪ್ಪ ಒಂದರಲ್ಲೇ ಒಂದು ಕೋಟಿ ರೂಪಾಯಿಗಳ ಪ್ರಾಫಿಟ್ ಮಾಡಿಸಿ ತೋರಿಸುತ್ತೇನೆ ದಯವಿಟ್ಟು ಹಾಲಿನ ಬೆಲೆಯನ್ನು ಕಡಿಮೆ ಮಾಡಿ. ಇವತ್ತು ಏನು ರೇಟು ಜಾಸ್ತಿ ಮಾಡಿದ್ದೀರಿ, ಅದರಲ್ಲಿ ಶೇಕಡಾ 50ರಷ್ಟು ಕಡಿಮೆ ಮಾಡತಕ್ಕ ಸಂದರ್ಭ ಇದೆ. ಅದನ್ನು ತಾವು ಏಕೆ ಯೋಚನೆ ಮಾಡಬಾರದು ?

ಶ್ರೀ ಎಂ. ಪಿ. ಪ್ರಕಾಶ್ :— ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ರಾಮದೇವ್ ಅವರು ಹೇಳತಕ್ಕಂಥ ಅಂಕ ಸಂಖ್ಯೆಗಳು ಸರಿಯಾದುದಲ್ಲ. ತುಪ್ಪದ ಬೆಲೆಯಲ್ಲೆ ಆಗಿರತಕ್ಕಂಥ ದರಗಳ ವಿಚಾರದಲ್ಲಿ.

ಅಧ್ಯಕ್ಷರು.— ಮಾನ್ಯ ಮುಖ್ಯ ಮಂತ್ರಿಗಳ ಈ ವಿಚಾರದಲ್ಲಿ ಉತ್ತರ ಹೇಳುತ್ತಾರಂತೆ.

ಶ್ರೀ ರಾಮಕೃಷ್ಣ ಹೆಗಡೆ — ಮಾನ್ಯ ಅಧ್ಯಕ್ಷರೇ, ಮೊನ್ನೆ ಹಳೇ ಸ್ಟಾಕ್ ಇದ್ದಂಥ ತುಪ್ಪವನ್ನು ಟೆಂಡರ್ ಕರೆದು ದೊಡ್ಡ ದೊಡ್ಡ ವ್ಯಾಪಾರಿಗಳಿಗೆ ಮಾರಾಟ ಮಾಡಿದ್ದು ನಿಜ. ನಾನು ಈ ವಿಚಾರದಲ್ಲಿ ಸಂಬಂಧಪಟ್ಟ ಅಧಿಕಾರಿಗಳನ್ನು ಕರೆದು ಹೇಳಿದ್ದೇನೆ. ಇನ್ನು ಮುಂದೆ ನಮ್ಮ ಜನತಾ ಬಜಾರ್ ಇದೆ, ಮತ್ತು ಕನ್ಸ್ಯೂಮರ್ಸ್, ಸೊಸೈಟೀಸ್ ಏನಿವೆ, ಅವುಗಳ ಮುಖಾಂತರ ನೀವು ಮಾರಾಟ ಮಾಡಬೇಕು. ದೊಡ್ಡ ದೊಡ್ಡ ಗುತ್ತಿಗೆದಾರರನ್ನು ಕರೆದು, ಟೆಂಡರ್ ಕರೆಯಿರಿ ಅಥವಾ ಯಾವುದೇ ರೀತಿಯಾಗಿ ಮಾಡಿ, ಕಡಿಮೆ ದರಕ್ಕೆ ನಮ್ಮ ನಾಗರೀಕರಿಗೆ ಕೊಡಬೇಕೆಂದು ಹೇಳಿದ್ದೇನೆ. ಈಗ ತುಪ್ಪ 34 ರೂಪಾಯಿ ಒಂದು ಕೆ.ಜಿ.ಗೆ ಇದೆ.

ಡಾ ವಿ. ಎಸ್. ಆಚಾರ್ಯ.— ಈಗ 40 ರೂಪಾಯಿ ಆಗಿದೆ.

ಶ್ರೀ ರಾವ ಕೃಷ್ಣ ಹೆಗಡೆ .— 38 ರೂಪಾಯಿ ಇದೆ. ಟೆಂಡರ್ ಕರೆದು ಮಾರಾಟ ಮಾಡಿದ್ದು ಬಹಳ ಕಡಿಮೆ ಬೆಲೆಗೆ. ಆದರಿಂದಲೇ ನಮ್ಮ ಡೈರಿ ಕಾರ್ಪೋರೇಷನ್‌ಗೆ ಬಹಳಷ್ಟು ಲುಕ್ಸಾನು ಕೂಡಾ ಆಗಿದೆ. ಈ ರೀತಿಯ ದರದ ವ್ಯತ್ಯಾಸದಿಂದ ಲುಕ್ಸಾನಾಗಿದೆ ಇನ್ನು ಮುಂದೆ ಈ ರೀತಿ ನಾವು ಮಾಡುವುದಿಲ್ಲ. ಇದು ಒಂದು ವಿಚಾರ. ಇನ್ನು ಎರಡನೆಯದು ಹಾಲಿನ ದರ ಏರಿಸತಕ್ಕಂಥ ಅನಿವಾರ್ಯವಾದ ಪ್ರಸಂಗ ಬಂದಿತ್ತು. ಯಾರು ಹಾಲು ಉತ್ಪಾದನೆ ಮಾಡುತ್ತಾರೆ, ಅಂತಹ ರೈತರು, ಬಹಳ ದಿವಸಗಳಿಂದಲೂ ತಾವು ಮಾರಾಟಮಾಡತಕ್ಕಂಥ ಹಾಲಿಗೆ ಕಾರ್ಪೊರೆಷನ್‌ನವರು ದರ ಜಾಸ್ತಿ ಕೊಡಬೇಕು, ಪಸುಗಳಿಗೆ ನಾವು ಹಾಕುವ ಬೇವಿನ ದರ ಹೆಚ್ಚಾಗಿದೆ. ಪ್ರತಿಯೊಂದರ ದರವೂ ಹೆಚ್ಚಾಗಿದೆ ಆದುದರಿಂದ ಈಗ ಹಾಲಿನ ಕ್ರಯ ಏನು ಸಿಗುತ್ತಿದೆ, ಅದು ನಮಗೆ ಗಿಟ್ಟುವುದಿಲ್ಲ ಎಂದು ಹೇಳಿ ಇವರು ಒಂದು ಮೆರವಣಿಗೆ ಬಂದು, ಕಬ್ಬನ್ ಪಾರ್ಕ್‌ನಲ್ಲಿ ಒಂದು ಸಭೆಯನ್ನು ಮಾಡಿದ್ದರು. ಆ ಸಭೆಗೆ ನಾವು ಹೋಗಿ ಸ್ವಲ್ಪ ಮಟ್ಟಿಗೆ ಹೆಚ್ಚು ಮಾಡುತ್ತೇವೆಂದು ಹೇಳಿದ್ದೆ. ಆ ಪ್ರಕಾರ ಹೆಚ್ಚಳ ಮಾಡಿದ್ದೇವೆ. ಒಂದು ಕಡೆ ಇದಾದರೆ, ಮತ್ತೊಂದು ಕಡೆ ನಮ್ಮ ಗ್ರಾಹಕರಿಂದ ಒಮ್ಮಿಂದೊಮ್ಮೆಗೆ ಹಾಲಿನ ದರ ಬಹಳ ಹೆಚ್ಚು ಮಾಡಿದ್ದೀರಿ, ಬಹಳ ತೀವ್ರವಾದಂಥ ಏರಿಕೆಯಾಗಿದೆ, ಇದನ್ನು ಕಡಿಮೆ ಮಾಡಲೇಬೇಕೆನ್ನುವ ಬೇಡಿಕೆ ಬಂದಿದೆ. ಈ ಮೊದಲೇ ನಾನು ಸರಕಾರದ ಪರವಾಗಿ ಒಂದೆರಡು ಸಂದರ್ಭದಲ್ಲಿ ಹೇಳಿದ್ದೆ, ಸ್ವಲ್ಪಮಟ್ಟಿಗೆ

ಇದನ್ನು ಕಡಿಮೆ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇವೆ ಎಂದು. ಇಂದು ಬೆಂಗಳೂರಿನಲ್ಲಿ ಡೈರಿ ಕಾರ್ಪೊರೇಷನ್ ಮಾರಾಟ ಮಾಡತಕ್ಕ ಹಾಲಿನ ದರವನ್ನು ಬೊಂಬಾಯಿ ಜೊತೆಗೆ ಅಥವಾ ಬೇರೆ ಕಡೆಗೆ ತುಲನೆ ಮಾಡಿ ನೋಡಿದರೆ, ಅಷ್ಟು ಹೆಚ್ಚಿಲ್ಲ. ಕೇವಲ ದಿಲ್ಲಿಯಲ್ಲಿ ಸ್ವಲ್ಪ ಕಡಿಮೆ ದರ ಇದೆ. ಆದರೂ ನಾಗರೀಕರ ಅತ್ಯಂತ ಆಗ್ರಹದ ಬೇಡಿಕೆಯನ್ನು ನಾವು ಗಮನದಲ್ಲಿಟ್ಟುಕೊಂಡು, ಬರುವ ತಿಂಗಳ ಒಂದನೇ ತಾರೀಖಿನಿಂದ ಒಂದು ಲೀಟರ್‌ಗೆ 10 ಪೈಸೆಗಳನ್ನು ಕಡಿಮೆ ಮಾಡಬೇಕೆಂದು ನಿರ್ಧಾರ ಮಾಡಿದ್ದೇವೆ.

ವಿಷಯ : ಧಾರವಾಡ ಜಿಲ್ಲೆ ಕೋಣ್ ತಾಲ್ಲೂಕ್, ನರೇಗಲ್ಲ ಶ್ರೀ ಅನ್ನದಾನೇಶ್ವರ ವಾಣಿಜ್ಯ ಕಾಲೇಜಿಗೆ ಸಿಬ್ಬಂದಿ ನೇಮಕ

ಪ್ರಶ್ನೆ : 27 (200) ಶ್ರೀಜ್ಞಾನದೇವ ದೊಡ್ಡಮೇಟಿ.— (ಕೋಣ್) ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಧಾರವಾಡ ಜಿಲ್ಲೆ ಕೋಣ ತಾಲ್ಲೂಕು ನರೇಗಲ್ಲ ಶ್ರೀ ಅನ್ನದಾನೇಶ್ವರ ವಾಣಿಜ್ಯ ಕಾಲೇಜಿಗೆ ಸಿಬ್ಬಂದಿ ನೇಮಕ ಮಾಡುವಾಗ (ಅಧ್ಯಾಪಕರ) ಹಿಂದುಳಿದ ವರ್ಗಗಳಿಗೆ ಅನ್ಯಾಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ;

ಆ) ಇದೇ ಕಾಲೇಜಿನ ವಾಣಿಜ್ಯ ವಿಭಾಗಕ್ಕೆ ಎರಡು ಅಧ್ಯಾಪಕರ ಹುದ್ದೆಗಳಿಗೆ ನೇಮಕಾತಿಯ ಸಲುವಾಗಿ ಅರ್ಜಿ ಕರೆದು ಮೂರು ಜನರನ್ನು ನೇಮಕ ಮಾಡಿಕೊಂಡಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ;

ಇ) ಈಗ ಆಗಿರುವ ಅಕ್ರಮಗಳ ಕುರಿತು ಸಂಬಂಧ ಪಟ್ಟವರ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ ?

ಉತ್ತರ :— ಶ್ರೀ ಬಿ. ರಾಚಯ್ಯ (ಶಿಕ್ಷಣ ಮಂತ್ರಿಗಳು).— ಅ) ಬಂದಿದೆ.

ಆ) ಹೌದು. ಶ್ರೀ ಅನ್ನದಾನೇಶ್ವರ ಕಲಾ ಮತ್ತು ವಿಜ್ಞಾನ ಕಾಲೇಜಿನಲ್ಲಿ ವಾಣಿಜ್ಯ ವಿಭಾಗವು 1978ನೇ ಇಸವಿಯಲ್ಲಿ ಒಂದು ಹೊಸ ವಿಭಾಗವಾಗಿ ಪ್ರಾರಂಭವಾಗಿರುವುದರಿಂದ ಮತ್ತು ಅದು ಅನುದಾನ ಪಡೆಯುವುದಕ್ಕೆ ಪೂರ್ವವಾದುದರಿಂದ, ಆಡಳಿತ ಮಂಡಳಿಯವರು ಹೊಸ ವಿಭಾಗಕ್ಕೆ ನೇಮಕಾತಿ ಮಾಡುವುದರಲ್ಲಿ ಪೂರ್ಣ ಸ್ವತಂತ್ರರಾಗಿರುತ್ತಾರೆ.

ಇ) ಉದ್ಭವಿಸುವುದಿಲ್ಲ.

ಶ್ರೀ ಜೆ.ಎಸ್. ದೊಡ್ಡಮೇಟಿ.— ಹಿಂದುಳಿದ ವರ್ಗದವರಿಗೆ ಅನ್ಯಾಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿವೆಯೇ ಎಂಬ ನನ್ನ ಪ್ರಶ್ನೆಗೆ ಹೌದು ಅಂತ ಉತ್ತರ ಹೇಳಿದ್ದಾರೆ. ಆದರೆ ಅದನ್ನು ಸರಿಪಡಿಸುವುದಕ್ಕೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎಂಬುದನ್ನು ಹೇಳುತ್ತೀರಾ?

ಶ್ರೀ ಬಿ. ರಾಚಯ್ಯ.— ಹಿಂದುಳಿದ ವರ್ಗದವರಿಗೆ ಈಗ ಆಗಿರತಕ್ಕಂತಹ ಅನ್ಯಾಯವನ್ನು ಮುಂದೆ ಆಗತಕ್ಕಂತಹ ನೇಮಕಾತಿಗಳಲ್ಲಿ ಸರಿಪಡಿಸಲಾಗುವುದು ಅಂತ ತಿಳಿಸುತ್ತೇನೆ.

ಶ್ರೀ ಜೆ ಎಸ್. ದೊಡ್ಡಮೇಟಿ.— ಈಗ ಒಂದು ವರ್ಷವಾಯಿತು. ಆಲ್ಲಿ ಹಿಂದುಳಿದ ವರ್ಗದ ಯಾರೊಬ್ಬರನ್ನೂ ನೇಮಕಾತಿ ಮಾಡಿಕೊಂಡಿಲ್ಲ. ಈ ಕುರಿತು ಸರ್ಕಾರ ಏನು ಕ್ರಮ ಕೈಗೊಂಡಿದೆ? ಕಳೆದ ಒಂದು ವರ್ಷದಿಂದಲೂ ಹಾಗೇ ನಡೆದಿದೆ

ಶ್ರೀ ಬಿ. ರಾಚಯ್ಯ.— 5 ವರ್ಷದ ನಂತರ ನಾವು ತೆಗೆದುಕೊಂಡ ಮೇಲೆ ಈ ರೋಸ್ಟರ್ ಪದ್ಧತಿಯನ್ನು ಜಾರಿಗೆ ತರುವುದಕ್ಕಾಗುತ್ತದೆ. ಅಲ್ಲಿಯವರೆವಿಗೂ ಅವರಿಗೆ ಅವಕಾಶ ಇದೆ. ಅದರಂತೆ ಅವರು ಮಾನವಿ ಮಾಡಿಕೊಂಡಿದ್ದಾರೆ

ಶ್ರೀ ಜೆ. ಎಸ್. ದೊಡ್ಡಮೇಟಿ.— ಅನ್ಯಾಯವಾಗಿದೆ ಎಂದು ಕಂಡು ಬಂದಿದ್ದರೂ ಅಂತಹವರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ?

ಶ್ರೀ ಬಿ. ರಾಚಯ್ಯ. 5ವರ್ಷ ಆದ ಮೇಲೆ ಗ್ರಾಂಟ್-ಇನ್-ಏಡ್ ಅನ್ನು ಸರ್ಕಾರ ಕೊಡುತ್ತದೆ ಆ ರೀತಿ ಗ್ರಾಂಟ್-ಇನ್ ಏಡ್ ಅನ್ನು ಕೊಟ್ಟ ಮೇಲೆ ಸರ್ಕಾರದ ಆಜ್ಞೆ ಏನಿದೆ, ರೋಸ್ಟರ್ ಪದ್ಧತಿ ಏನಿದೆ ಅದನ್ನು ಅನುಸರಿಸಿದರೇ ಅವರಿಗೆ ಗ್ರಾಂಟ್ ಕೊಡುವುದು. ಇಲ್ಲದಿದ್ದರೆ ಸರ್ಕಾರ ಗ್ರಾಂಟ್ ಕೊಡುವುದಿಲ್ಲ.

ಶ್ರೀ ಜೆ.ಎಸ್. ದೊಡ್ಡಮೇಟಿ.— ಇದು ಒಂದೇ ಕಾಲೇಜಿಗೆ ಸಂಬಂಧಪಟ್ಟದ್ದಲ್ಲ. ಇದೇ ರೀತಿ ಎಲ್ಲಾ ಕಾಲೇಜುಗಳಲ್ಲೂ ಇದೆ.

ಅಧ್ಯಕ್ಷರು.— ಗ್ರಾಂಟ್-ಇನ್-ಏಡ್‌ನ ವ್ಯಾಪ್ತಿಯೊಳಗೆ ಬರುವವರೆಗೆ ಅವರನ್ನು ಒತ್ತಾಯ ಮಾಡುವುದಕ್ಕೆ ಸಾಧ್ಯವಿಲ್ಲ ಅಂತ ಮಂತ್ರಿಗಳು ಹೇಳುತ್ತಿದ್ದಾರೆ.

ಶ್ರೀ ಜೆ. ಎಸ್ ದೊಡ್ಡಮೇಟಿ —5ವರ್ಷದವರೆಗೆ ಅವರು ಸ್ವತಂತ್ರವಾಗಿದ್ದಾರೆಂದು ತಿಳಿದುಕೊಂಡು ತಮ್ಮ ಮಕ್ಕಳು, ಮರಿಗಳನ್ನು ಸೇರಿಸಿಕೊಂಡರೆ ಹೇಗೆ? ಇದನ್ನು ತಡೆ ಹಿಡಿಯುವುದಕ್ಕೆ ಸರ್ಕಾರದವರು ಯಾವುದಾದರೊಂದು ಕಾನೂನನ್ನು ತರುತ್ತಾರೆಯೇ?

ಶ್ರೀ ಬಿ. ರಾಚಯ್ಯ.— ಹೊಸದಾಗಿ ನಿಯಮಗಳನ್ನು ಮಾಡುವಾಗ ಅದನ್ನು ಅನುಸರಿಸುತ್ತೇವೆ.